# ನಾಗರಿಕ ಸಂಹಿತೆ

# ಜನವರಿ ೨೦೨೦

## ಸಾರ್ವಜನಿಕ ಸೇವಾ ವಿತರಣೆಯನ್ನು ಉತ್ತೇಜಿಸುವುದು

ನಾಗರಿಕರಿಗೆ ಸೇವೆಗಳನ್ನು ತಲುಪಿಸುವುದು **MEA** ಹೃದಯದಲ್ಲಿದೆ . ನಾಗರಿಕ ಸೇವೆಗಳ ಸ್ಪಂದಿಸುವ ಮತ್ತು ಪರಿಣಾಮಕಾರಿ ವಿತರಣೆಯನ್ನು ಕಲ್ಪಿಸುವುದು ನಮ್ಮ ನಿರಂತರ ಪ್ರಯತ್ನ

सत्यमेव जयते

ಭಾರತ ಸರ್ಕಾರ

ವಿದೇಶಾಂಗ ವ್ಯವಹಾರಗಳ ಸಚಿವಾಲಯ

## ನಾಗರಿಕ ಸಂಹಿತೆ

## ಸಾರ್ವಜನಿಕ ಸೇವೆಯ ವೃದ್ಧಿ

**ನಾಗರಿಕರಿಗೆ ಸೇವೆಗಳನ್ನು ಒದಗಿಸುವುದೇ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಧ್ಯೇಯ. ಜವಾಬ್ದಾರಿಯುತ ಹಾಗೂ ದಕ್ಷ ನಾಗರಿಕ ಸೇವೆಗಳನ್ನು ಒದಗಿಸುವಲ್ಲಿ ನಿರಂತರ ಪ್ರಯತ್ನಿಸುತ್ತೇವೆ.**

ಪಾಸ್‌ಪೋರ್ಟ್ ಸೇವೆಗಳು

| ಕ್ರಮ ಸಂಖ್ಯೆ | ಒದಗಿಸುವ ಸೇವೆಗಳು | ಶುಲ್ಕ/ಬೆಲೆ | ಪ್ರಕ್ರಿಯೆ | ಕಾಲಾನುಕ್ರಮ ಸೂಚಕ |
|---|---|---|---|---|
| ೧ | ಸಾಮಾನ್ಯ ಪಾಸ್‌ಪೋರ್ಟ್ ವಿತರಣೆ | ಪಾಸ್‌ಪೋರ್ಟ್ ಸೇವಾ ಆನ್‌ಲೈನ್ ಪೋರ್ಟಲ್‌ನಲ್ಲಿ ಶುಲ್ಕ ಲೆಕ್ಕಾಚಾರ ಮಾಹಿತಿ ಲಭ್ಯ.<br>ಈ ಲಿಂಕ್ ಗಮನಿಸಿ: https://portal1.passportindia.gov.in/AppOnlineProject/fee/feeInput<br>ಅಥವಾ<br>https://portal1.passportindia.gov.in/AppOnlineProject/pdf/GSR_731_dtd_28.09.2012<br><br>**ತತ್ಕಾಲ್ ಯೋಜನೆ:** ಪಾಸ್‌ಪೋರ್ಟ್‌ಗಾಗಿ ತತ್ಕಾಲ್ ಯೋಜನೆಯಲ್ಲಿ ಹೆಚ್ಚುವರಿಯಾಗಿ ರೂ. ೨೦೦೦ ವಿಧಿಸಲಾಗಿದೆ. | ಪಾಸ್‌ಪೋರ್ಟ್ ಆನ್‌ಲೈನ್ ಸೇವಾ ಪೋರ್ಟಲ್‌ನಲ್ಲಿ ಪಾಸ್‌ಪೋರ್ಟ್ ಪಡೆಯುವ ಪ್ರಕ್ರಿಯೆಯನ್ನು ಹಂತ ಹಂತವಾಗಿ ವಿವರಿಸಲಾಗಿದೆ.<br>ಈ ಲಿಂಕ್ ಗಮನಿಸಿ: https://portal1.passportindia.gov.in/AppOnlineProject/procEFormSub | ೧. **ಮೊದಲಬಾರಿಗೆ/ಹೊಸದಾಗಿ ಪಾಸ್‌ಪೋರ್ಟ್ ವಿತರಿಸಲು:** ಕೆಲಸದ ಅವಧಿ ೩೦ ದಿನಗಳು (ಪೋಲೀಸ್ ಪರಿಶೀಲನೆಯ ಅವಧಿ ಹೊರತು ಪಡಿಸಿ)<br>೨. **ಮರು ವಿತರಣೆ:** ಕೆಲಸದ ಅವಧಿ ಏಳು ದಿನಗಳು ಇದ್ದಲ್ಲಿ ಪೋಲೀಸ್ ಪರಿಶೀಲನೆಯ ಅಗತ್ಯವಿಲ್ಲ. ಕೆಲಸದ ಅವಧಿ ೩೦ ದಿನಗಳಿದ್ದರೆ ಪೋಲೀಸ್ ಪರಿಶೀಲನೆ ಮಾಡಬೇಕು. ಪೋಲೀಸ್ ಪರಿಶೀಲನೆಯ ಅವಧಿ ಹೊರತು ಪಡಿಸಲಾಗುವುದು.<br>೩. **ತತ್ಕಾಲ್‌ಗಾಗಿ:** ಕೆಲಸದ ಅವಧಿ ಮೂರು ದಿನಗಳು. ಪಾಸ್‌ಪೋರ್ಟ್ ವಿತರಿಸಲು ಅರ್ಜಿದಾರ |

| | | | | |
|---|---|---|---|---|
| | | | | ಅರ್ಹತೆ ಹೊಂದಿರಬೇಕು. ಅರ್ಹತೆಯ ವಿವರಕ್ಕೆ ಈ ಲಿಂಕ್ ನೋಡಿ:<br>https://portal1.passportindia.gov.in/AppOnlineProject/docAdvisor/attachmentAdvFresh |
| ೨ | ಡಿಪ್ಲೊಮ್ಯಾಟಿಕ್/ ರಾಜತಾಂತ್ರಿಕ ಪಾಸ್‌ಪೋರ್ಟ್ ಮತ್ತು ಅಫಿಷಿಯಲ್/ ಅಧಿಕೃತ ಪಾಸ್‌ಪೋರ್ಟ್ ವಿತರಣೆ | ಶುಲ್ಕ ಇಲ್ಲ | ಪಾಸ್‌ಪೋರ್ಟ್ ಆನ್‌ಲೈನ್ ಸೇವಾ ಪೋರ್ಟಲ್‌ನಲ್ಲಿ ಪಾಸ್‌ಪೋರ್ಟ್ ಪಡೆಯುವ ಪ್ರಕ್ರಿಯೆಯನ್ನು ಹಂತ ಹಂತವಾಗಿ ವಿವರಿಸಲಾಗಿದೆ.<br>ಈ ಲಿಂಕ್ ಗಮನಿಸಿ:<br>https://portal1.passportindia.gov.in/AppOnlineProject/online/procDiplomaticFormSub | ಪ್ರತ್ಯೇಕ ಅರ್ಜಿಗಳನ್ನು ಪರಿಶೀಲಿಸಿ, ಏಳು ದಿನಗಳ ಕೆಲಸದ ಅವಧಿಯೊಳಗೆ ವಿತರಿಸಲಾಗುವುದು. |
| ೩ | ಪೊಲೀಸ್ ತಿರುವಳಿ (ಕ್ಲಿಯರೆನ್ಸ್) ಪ್ರಮಾಣಪತ್ರ ವಿತರಣೆ (ಭಾರತೀಯ ಪಾಸ್‌ಪೋರ್ಟ್ ಹೊಂದಿರುವವರಿಗಾಗಿ ಕೆಲವು ದೇಶಗಳಿಗೆ ಸಂಬಂಧಿಸಿದಂತೆ ದೀರ್ಘ ಕಾಲದ ವಲಸೆ/ವೀಸಾ/ ಉದ್ಯೋಗ ವೀಸಾ) | ರೂ<br>೫<br>೦<br>೦ | ಪಾಸ್‌ಪೋರ್ಟ್ ಆನ್‌ಲೈನ್ ಸೇವಾ ಪೋರ್ಟಲ್‌ನಲ್ಲಿ ಪಾಸ್‌ಪೋರ್ಟ್ ಪಡೆಯುವ ಪ್ರಕ್ರಿಯೆಯನ್ನು ಹಂತ ಹಂತವಾಗಿ ವಿವರಿಸಲಾಗಿದೆ.<br>ಈ ಲಿಂಕ್ ಗಮನಿಸಿ:<br>https://portal1.passportindia.gov.in/AppOnlineProject/online/pccOlineApp | ಕೆಲಸದ ಅವಧಿ ೩೦ ದಿನಗಳವರೆಗೆ (ಪೊಲೀಸ್ ಪರಿಶೀಲನೆ ಅಗತ್ಯವಿದ್ದಲ್ಲಿ) |

| | | | | |
|---|---|---|---|---|
| | | | | |
| ೪ | ಪಾಸ್‌ಪೋರ್ಟ್ ಹಿಂದಿರುಗಿಸಿದ ಪ್ರಮಾಣಪತ್ರ (ಭಾರತೀಯ ನಾಗರಿಕತ್ವವನ್ನು ಹಿಂದಿರುಗಿಸುವವರಿಗೆ ) | ರೂ. ೫೦೦ (೦೧.೦೬.೨೦೧೦ಕ್ಕೂ ಮೊದಲಿನಿಂದಲೂ ನೆಲೆಸಿರುವ ವಿದೇಶಿ ಪ್ರಜೆಯಾಗಿದ್ದರೆ) ರೂ.೫೦೦೦ (೦೧.೦೬.೨೦೧೦ರ ನಂತರ ಭಾರತದಲ್ಲಿ ನೆಲೆಸಿರುವ ವಿದೇಶಿ ಪ್ರಜೆಯಾಗಿದ್ದರೆ) | ಪಾಸ್‌ಪೋರ್ಟ್ ಆನ್‌ಲೈನ್ ಸೇವಾ ಪೋರ್ಟಲ್‌ನಲ್ಲಿ ಪಾಸ್‌ಪೋರ್ಟ್ ಪಡೆಯುವ ಪ್ರಕ್ರಿಯೆಯನ್ನು ಹಂತ ಹಂತವಾಗಿ ವಿವರಿಸಲಾಗಿದೆ. ಈ ಲಿಂಕ್ ಗಮನಿಸಿ: https://portal1.passportindia.gov.in/AppOnlineProject/online/procFormLoc | ಕೆಲಸದ ಅವಧಿ ೩ ದಿನಗಳು (ಈ ಪ್ರಕರಣಗಳಲ್ಲಿ ಪೊಲೀಸ್ ಪರಿಶೀಲನೆಯ ಅಗತ್ಯ ಇರುವುದಿಲ್ಲ) |
| ೫ | ನಿಯಂತ್ರಣ ರೇಖೆ/ಎಲ್‌ಓಸಿ ಅನುಮತಿ ನೀಡಲು (ಜಮ್ಮು ಕಾಶ್ಮೀರದ ನಿವಾಸಿಗಳು ಎಲ್‌ಓಸಿಯಲ್ಲಿ ಇರುವ ತಮ್ಮ ಸಂಬಂಧಿಕರನ್ನು ಭೇಟಿ ಮಾಡಲು) | ಯಾವುದೇ ಶುಲ್ಕ ಇಲ್ಲ | ಪಾಸ್‌ಪೋರ್ಟ್ ಆನ್‌ಲೈನ್ ಸೇವಾ ಪೋರ್ಟಲ್‌ನಲ್ಲಿ ಪಾಸ್‌ಪೋರ್ಟ್ ಪಡೆಯುವ ಪ್ರಕ್ರಿಯೆಯನ್ನು ಹಂತ ಹಂತವಾಗಿ ವಿವರಿಸಲಾಗಿದೆ. ಈ ಲಿಂಕ್ ಗಮನಿಸಿ: https://portal1.passportindia.gov.in/AppOnlineProject/online | ಪ್ರತ್ಯೇಕ ಪ್ರಕರಣಗಳ ಮೇಲೆ ಆಧಾರಿತ |

| | | | | |
|---|---|---|---|---|
| | | | /procFormLoc | |

ಕಾಲಾನುಕ್ರಮದಲ್ಲಿ ತಿಳಿಸಿರುವ ಸೇವೆಗಳು ಅನ್ವಯವಾಗಲು, ರಶೀದಿ ಪಡೆದ ದಿನಾಂಕದಿಂದ ಸಲ್ಲಿಸಿರುವ ಸಂಪೂರ್ಣ ದಾಖಲಾತಿಗಳು ಪಿಐಎಗೆ ತೃಪ್ತಿಯಾಗಬೇಕು/ಒಪ್ಪಿಗೆಯಾಗಬೇಕು ಮತ್ತು ಪರಿಶೀಲನಾ ಪತ್ರ ಅವಶ್ಯವಾಗಿ ಸಲ್ಲಿಸಬೇಕು.

ಅಗತ್ಯ ದಾಖಲಾತಿಗಳ ಪಟ್ಟಿ ಈ ಲಿಂಕ್‌ನಲ್ಲಿ ಲಭ್ಯವಿದೆ:
https://prtal1.passportindia.gov.in/AppOnlineProject/welcome -> Home -> Document Advisor

ಕುಂದು ಕೊರತೆ ಪರಿಹಾರ

ಸೇವೆಯ ಗುಣಮಟ್ಟ ಅಥವಾ ಸೇವೆಯನ್ನು ತಲುಪಿಸುವಲ್ಲಿ ವಿಫಲವಾಗಿದ್ದರೆ ಅಥವಾ ಪಿಐಎಯ ಕಾರ್ಯ ವೈಖರಿಯ ಬಗ್ಗೆ ದೂರಿಗಳಿದ್ದರೆ ಅವುಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು (ಎ) ಕೇಂದ್ರೀಯ ಸಾರ್ವಜನಿಕ ಕುಂದುಕೊರತೆ ಪರಿಹಾರ ಮತ್ತು ವೀಕ್ಷಣ ವ್ಯವಸ್ಥೆ (ಸಿಪಿಜಿಆರ್‌ಎಎಂಎಸ್) www.pgportal.gov.in (ಬಿ) www.passportindia.gov.in (ಸಿ) ಟೋಲ್ ಫ್ರೀ ಸಂಖ್ಯೆ ೧೮೦೦-೨೫೮-೧೮೦೦ ಯಲ್ಲಿ ನೋಂದಾಯಿಸಿ.

ಪ್ರತಿಕ್ರಿಯೆ/ಸಲಹೆಗಳು

ಪ್ರತಿಕ್ರಿಯೆ/ಸಲಹೆಗಳನ್ನು ನೀಡಲು (೧) www.passportindia.gov.in ಪಾಸ್‌ಪೋರ್ಟ್ ಪೋರ್ಟಲ್‌ಗೆ ಲಾಗಿನ್ ಆಗಿ (೨) ಟೋಲ್ ಫ್ರೀ ಸಂಖ್ಯೆ ೧೮೦೦-೨೫೮- ೧೮೦೦ಗೆ ಕರೆ ಮಾಡಿ (೩) ಸಹಾಯಕ ಪಾಸ್‌ಪೋರ್ಟ್ ಅಧಿಕಾರಿಗೆ ಪತ್ರ ಬರೆಯಬಹುದು, ವಿಳಾಸ- ಸಹಾಯಕ ಪಾಸ್‌ಪೋರ್ಟ್ ಅಧಿಕಾರಿ (ಪಿಜಿ), ಸಾರ್ವಜನಿಕ ಕುಂದು ಕೊರತೆ ವಿಭಾಗ, ಕೊಠಡಿ ಸಂಖ್ಯೆ ೨೮, ಸಿಪಿವಿ ಡಿವಿಜನ್, ವಿದೇಶಾಂಗ ವ್ಯವಹಾರಗಳ ಸಚಿವಾಲಯ, ಪಟಿಯಾಲ ಹೌಸ್ ಆನೆಕ್ಸ್, ತಿಲಕ್ ಮಾರ್ಗ್, ನವ ದೆಹಲಿ ೧೧೦೦೦೧. ದೂರವಾಣಿ ಸಂಖ್ಯೆ: ೦೧೧-೨೩೩೮೮೫೧೯, ೨೩೩೮೮೮೯೭, ಫ್ಯಾಕ್ಸ್ ಸಂ. ೨೩೩೮೮೮೭೧. ಇ ಮೈಲ್ : passport.pg@mea.gov.in

ವಿದೇಶದಲ್ಲಿ ನೆಲೆಸಿರುವ ಭಾರತೀಯರು ಎಲ್ಲಾ ಬಗೆಯ ಪಾಸ್‌ಪೋರ್ಟ್ ಸೇವೆಗಾಗಿ ಹತ್ತಿರದ ರಾಯಭಾರ/ಕಾನ್ಸ್ಯುಲೇಟ್ ಕಚೇರಿಯನ್ನು ಸಂಪರ್ಕಿಸಿ.

ವಿವಿಧ ರಾಯಭಾರ/ಕಾನ್ಸುಲೇಟ್ ಸಂಪರ್ಕ ಮಾಹಿತಿಗೆ ಈ ಲಿಂಕ್: http://mea.gov.in/indian-missions-abroad-new.htm

ನಿಯಮಿತ/ಮೇಲಿಂದ ಮೇಲೆ ಕೇಳಲಾದ ಪ್ರಶ್ನೆಗಳಗೆ (FAQ)ದಯಮಾಡಿ ನೋಡಿ: https://portal1.passportindia.gov.in/AppOnlineProject/online/faqMainPage

ಮೊಬೈಲ್‌ಆಪ್ ಡೌನ್‌ಲೋಡ್ ಮಾಡಲು, ದಯಮಾಡಿ ಈ ಲಿಂಕ್ ನೋಡಿ: http://portal2.passportindia.gov.in/AppOnlineProject/user/mPassportSeva

**ದೂತಾವಾಸ ಸೇವೆಗಳು (Consular)**

**ಅಪೋಸ್ಟಿಲ್ ಮತ್ತು ದೃಢೀಕರಣ ಸೇವೆಗಳು**

| ಕ್ರಮ ಸಂಖ್ಯೆ | ಒದಗಿಸುವ ಸೇವೆಗಳು | ಬಳಕೆದಾರರ ಶುಲ್ಕ | ಪ್ರಕ್ರಿಯೆ | ಕಾಲಾನುಕ್ರಮ |
|---|---|---|---|---|

| | | | | |
|---|---|---|---|---|
| ೧ | ಅಪೋಸ್ಟಿಲ್<br>(ದಿ ಹೇಗ್ ಒಡಂಬಡಿಕೆಯ ಸದಸ್ಯ ರಾಷ್ಟ್ರಗಳ ದಾಖಲೆಗಳ ದೃಢೀಕರಣಕ್ಕೆ ಅನ್ವಯಿಸುತ್ತದೆ)<br>www.hcch.net/en/instruments/conventions/status-table/?cid=41 | **ಎಂಇಎ:**<br>ಪ್ರತೀ ಅಪೋಸ್ಟಿಲ್‌ಗೆ ರೂ.೫೦ (ಅಪಾಸ್ಟಲ್ ಸೇವೆಗಳ ಮುದ್ರಣ ಶುಲ್ಕ)<br>**ಹೊರಗುತ್ತಿಗೆ ಏಜೆನ್ಸಿಗಳು**<br>(ದಾಖಲೆಗಳ ಸಂಗ್ರಹ ಮತ್ತು ವಿತರಣೆಗಾಗಿ):<br>ರೂ.೪೦ | ಪ್ರಕ್ರಿಯೆಯ ಸಂಪೂರ್ಣ ಮಾಹಿತಿಗೆ ಈ ಲಿಂಕ್ ನೋಡಿ:<br>http://mea.gov.in/apostille.htm<br><br>**ಟಿಪ್ಪಣಿ**<br>(೧)ಸಿಬಿಎಸ್‌ಇ, ಮಹಾರಾಷ್ಟ್ರ ಎಜುಕೇಷನ್ ಬೋರ್ಡ್ ಮತ್ತು ಸಿಐಐ ದಾಖಲೆಗಳನ್ನು ಜ- ಖಚಿಟಚಿಜ (ಇ- ಸನದ್) ನಲ್ಲಿ ಮಾತ್ರ ದೃಢೀಕರಿಸಲಾಗುವುದು<br><br>(೨)ರಾಜ್ಯ/ಕೇಂದ್ರಾಡಳಿತ ಪ್ರದೇಶಗಳು ಪ್ರಮಾಣೀಕರಿಸಿದ ದಾಖಲೆಗಳನ್ನು ಮಾತ್ರ ಎಂಇಎ ಅಪೋಸ್ಟಿಲ್ ಮಾಡುವುದು | ಕೆಲಸದ ದಿನಗಳು ೩ |
| ೨ | ಸಾಮಾನ್ಯ ದೃಢೀಕರಣ (ದಿ ಹೇಗ್ ಒಡಂಬಡಿಕೆಯ ಸದಸ್ಯರಲ್ಲದ ರಾಷ್ಟ್ರಗಳಿಗೆ ಅಪೋಸ್ಟಿಲ್ ಸ್ವೀಕೃತಿ ಆಗುವುದಿಲ್ಲ) | **ಎಂಇಎ ಉಚಿತ**<br>**ಹೊರಗುತ್ತಿಗೆ ಏಜೆನ್ಸಿಗಳು**<br>(ದಾಖಲೆಗಳ ಸಂಗ್ರಹ ಮತ್ತು ವಿತರಣೆಗಾಗಿ):<br>ರೂ.೪೦<br>**ದಾಖಲೆಗಳ ದೃಢೀಕರಣ:** ಉಚಿತ | **ಪ್ರಕ್ರಿಯೆಯ ಸಂಪೂರ್ಣ ಮಾಹಿತಿಗೆ ಈ ಲಿಂಕ್ ನೋಡಿ:**<br>http://mea.gov.in/apostille.htm<br>ಟಿಪ್ಪಣಿ<br>ರಾಜ್ಯ/ಕೇಂದ್ರಾಡಳಿತ ಪ್ರದೇಶಗಳು ಪ್ರಮಾಣೀಕರಿಸಿದ ದಾಖಲೆಗಳನ್ನು ಮಾತ್ರ ಎಂಇಎ ದೃಢೀಕರಿಸುವುದು. | ೩ ಕೆಲಸದ ದಿನಗಳು |

**ಭಾರತಕ್ಕೆ ಹಿಂದಿರುಗಲು ಯಾವುದೇ ನಿರ್ಬಂಧ್ ಇಲ್ಲ (ಎನ್ಓಆರ್ಐ) ಸೇವೆ**

| ಕ್ರಮ ಸಂಖ್ಯೆ | **ಒದಗಿಸುವ ಸೇವೆ** | **ಬಳಕೆದಾರರ ಶುಲ್ಕ** | **ಪ್ರಕ್ರಿಯೆ** | **ಕಾಲಾನುಕ್ರಮ** |
|---|---|---|---|---|
| ೧ | ಭಾರತಕ್ಕೆ ಹಿಂದಿರುಗಲು ಯಾವುದೇ ನಿರ್ಬಂಧ ಇಲ್ಲ (ಎನ್ಓಆರ್ಎ) ಪ್ರಮಾಣಪತ್ರ ವಿತರಣೆ ಭಾರತೀಯರು ಎಚ್೧ಬಿ ವೀಸಾಗೆ ಅರ್ಜಿ ಸಲ್ಲಿಸಲು, ಜೆ-೧ ಅಥವಾ | ಯುಎಸ್‌ಡಿ ೨೦<br><br>ಶುಲ್ಕ ಇಲ್ಲ | ಯುಎಸ್‌ಎನಲ್ಲಿ ನೆಲೆಸಿರುವ ಅರ್ಜಿದಾರರು ಯುಎಸ್‌ಎನಲ್ಲಿ ಇರುವ ಭಾರತೀಯ ಮಿಷನ್/ಪೋಸ್ಟ್‌ನಲ್ಲಿ ಅರ್ಜಿ ಸಲ್ಲಿಸಬೇಕು. ಯುಎಸ್‌ಎ ಅಥವಾ ಭಾರತ ಎರಡೂ ರಾಷ್ಟ್ರಗಳಲ್ಲಿ ನೆಲೆಸಿರದ ಅರ್ಜಿದಾರರು ಅವರು ಪ್ರಸ್ತುತ ನೆಲೆಸಿರುವ ದೇಶದಲ್ಲಿನ ಭಾರತೀಯ ಮಿಷನ್/ಪೋಸ್ಟ್‌ನಲ್ಲಿ ಅರ್ಜಿ ಸಲ್ಲಿಸಬೇಕು.<br><br>ಭಾರತಕ್ಕೆ ಹಿಂದಿರುಗಿರುವವರು ಈ ವಿಳಾಸಕ್ಕೆ ಅರ್ಜಿ ಸಲ್ಲಿಸಬಹುದು.<br>ಸಿಪಿವಿ ವಿಭಾಗ (ಕಾನ್ಸುಲಾರ್ – ಖ ಸೆಕ್ಷನ್), ಎಂಇಎ, ಪಟಿಯಾಲ ಹೌಸ್ ಆನೆಕ್ಸ್, ತಿಲಕ್ ಮಾರ್ಗ್, ನವ ದೆಹಲಿ ; (ದೂ. ಸಂ ೦೧೧-೨೩೩೮೭೮೧೬೫ ; ಇ ಮೈಲ್ socons@mea.gov.in<br><br>**ಅರ್ಜಿ ಸಲ್ಲಿಸುವ ಸಂಪೂರ್ಣ ಪ್ರಕ್ರಿಯೆ ಮತ್ತು ಅಗತ್ಯ ದಾಖಲೆಗಳಿಗಾಗಿ ಈ ಲಿಂಕ್ ನೋಡಿ:** http://www.mea.gov.in/nori.htm | ಅರ್ಜಿಯನ್ನು ಸಲ್ಲಿಸಿದ ೭ ದಿನಗಳ ಒಳಗೆ (ಎನ್ಒಸಿಯಿಂದ ಆರ್‌ಪಿಒ, ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ ಮತ್ತು ರಾಜ್ಯ ಗೃಹ ಇಲಾಖೆ ಮತ್ತು ರಿವ್ಯೂ ಕೇಸ್ ಸಂಖ್ಯೆ ವಿನಾಯಿತಿ) |

**ವಿದೇಶದಲ್ಲಿ ಉದ್ಯೋಗ ಸೇವೆಗಳು ಮತ್ತು ಪ್ರೊಟೆಕ್ಟೊರೇಟ್ ಜನರಲ್ ಆಫ್ ಎಮಿಗ್ರೆಂಟ್ಸ್ (ಪಿಜಿಇ)**

| ಕ್ರಮ ಸಂ. | **ಸೇವೆಗಳ ವಿವರಣೆ** | **ಅಧಿಕಾರಿಯ ಜವಾಬ್ದಾರಿ (ಸೇವೆಯನ್ನು ಒದಗಿಸುವ ಹುದ್ದೆ/ದೂರವಾಣಿ/ಇಮೈಲ ್)** | **ಸೇವೆಗಳನ್ನು ಒದಗಿಸುವ ಕಾಲಾವಕಾಶ** | **ಅಗತ್ಯ ದಾಖಲೆಗಳು** |
|---|---|---|---|---|

| | | | | |
|---|---|---|---|---|
| ೧ | ಎಮಿಗ್ರೇಷನ್ ಕಾಯ್ದೆ ೧೯೮೩ರ ಸೆಕ್ಷನ್ ೧೧ (೨) (ಬಿ) ಪ್ರಕಾರ **ಅರ್ಹತಾ ಪತ್ರ** ನೀಡುವುದು | ಪ್ರೊಟೆಕ್ಟರ್ ಜನರಲ್ ಆಫ್ ಎಮಿಗ್ರೆಂಟ್ಸ್ ಫೋನ್: ೦೧೧-೨೩೮೭೪೨೫೦ ಫಾಕ್ಸ್: ೦೧೧ ೨೪೧೯೭೯೮೪ Email:-pge@mea.gov.in ನಲ್ಲಿ ಆನ್‌ಲೈನ್ ಅರ್ಜಿ ಸಲ್ಲಿಸಬಹುದು. ಇದು ಸಂಬಂಧ ಪಟ್ಟ ಪ್ರೊಟೆಕ್ಟರೇಟ್ ಆಫ್ ಜನರಲ್ ಕಚೇರಿಗೆ ತಲುಪುತ್ತದೆ | ಸಂಪೂರ್ಣ ದಾಖಲೆಗಳ ರಶೀದಿ ಪಡೆದ **೩೦ ಕೆಲಸದ ದಿನಗಳು** (ಅಗತ್ಯ ದಾಖಲಾತಿಗಳನ್ನು ಒದಗಿಸಿರುವ ಆಧಾರದ ಮೇಲೆ ಸೇವೆಯನ್ನು ಒದಗಿಸುವ ಸಮಯ ನಿರ್ಧರಿತವಾಗುತ್ತದೆ. ಅಗತ್ಯ ದಾಖಲಾತಿಗಳನ್ನು ಸರಿಯಾಗಿ ಒದಗಿಸದಿದ್ದಲ್ಲಿ/ ದಾಖಲೆಗಳಲ್ಲಿ ಕೊರತೆ ಕಂಡು ಬಂದಲ್ಲಿ, ಹೆಚ್ಚುವರಿ ಮಾಹಿತಿ ಬೇಕಿದ್ದಲ್ಲಿ ನಿರ್ದಿಷ್ಟ ಸಮಯಕ್ಕೆ ಸೇವೆಯನ್ನು ನೀಡಲು ಸಾಧ್ಯವಿಲ್ಲ) | ಅರ್ಜಿದಾರ ಕೆಳಗಿನ ದಾಖಲೆಗಳೊಂದಿಗೆ **ಜುಾಡಿಚಿಣಜಿರಾಟು** ನಲ್ಲಿ ಆನ್‌ಲೈನ್ ಅರ್ಜಿ ಸಲ್ಲಿಸಬೇಕು. ಇದು ಸಂಬಂಧ ಪಟ್ಟ ಪ್ರೊಕೆಕ್ಟರೇಟ್ ಆಫ್ ಜನರಲ್ ಕಚೇರಿಗೆ ತಲುಪುತ್ತದೆ.<br><br>೧. ಫಾರ್ಮ್ ೧ ಅರ್ಜಿದಾರನ ಸಹಿ ಮತ್ತು ಮೊಹರು ಹಾಕಿರಬೇಕು.<br>೨. ಎಮಿಗ್ರೇಷನ್ ಕಾಯ್ದೆ ೧೯೮೩ರ ನಿಯಮ ೭(೨) ಎ ಪ್ರಕಾರ ರೂ.೨೫,೦೦೦ದ ಆನ್‌ಲೈನ್ ಪಾವತಿ/ಡಿಮಾಂಡ್ ಡ್ರಾಫ್ಟ್ ಅನ್ನು ಪಿಎಜಿ, ಎಂಇಎ ನವದೆಹಲಿಗೆ ಪ್ರೊಸೆಸಿಂಗ್/ ಅರ್ಜಿ ಪ್ರಕ್ರಿಯಾ ಶುಲ್ಕ<br>೩. ಕಂಪೆನಿಯ ಮಾಲೀಕ/ ವ್ಯವಸ್ಥಾಪಕ ಪಾಲುದಾರ/ವ್ಯವಸ್ಥಾಪಕ ನಿರ್ದೇಶಕನು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಕಂಪೆನಿ/ಫರ್ಮ್‌ನಿಂದ ದೃಢೀಕರಿಸಿರಬೇಕು<br>೪. ಕಳೆದ ೫ ವರ್ಷಗಳಲ್ಲಿ ಮಾಲೀಕರು/ಎಲ್ಲ ಪಾಲುದಾರರು/ಎಲ್ಲ ನಿರ್ದೇಶಕರ ಹೆಸರು/ವಯಸ್ಸು/ವಾಸಸ್ಥಳ/ ಹೊಂದಿರುವ ಹುದ್ದೆ/ವ್ಯವಹಾರ ಚಟುವಟಿಕೆಗಳ ವಿವರವಾದ ಹೇಳಿಕೆ<br>೫. ಮಾಲೀಕರು/ವ್ಯವಸ್ಥಾಪಕ ಪಾಲುದಾರರು/ವ್ಯವಸ್ಥಾಪಕ ನಿರ್ದೇಶಕರ ದೃಢೀಕರಿಸಿದ ಮಾದರಿ ಸಹಿ |

| | | | | |
|---|---|---|---|---|
| | | | | ೬. ಎಮಿಗ್ರೇಷನ್ ಕಾಯ್ದೆ ೧೯೮೩ರ ನಿಯಮ ೭ (೨) ೧ ರ ಪ್ರಕಾರ ಅರ್ಜಿದಾರನು ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯ/ಸಂಸ್ಥೆಯಿಂದ ಪಡೆದ ಪದವಿ/೨ ವರ್ಷದ ಡಿಪ್ಲಮಾ/ಅದಕ್ಕೆ ಸರಿಸಮನಾದ ಪದವಿಯ ಪ್ರಮಾಣಪತ್ರದ ಪ್ರತಿ<br>೭. ಅರ್ಜಿದಾರನು ಕಂಪನಿ ಅಥವಾ ಸಂಸ್ಥೆಗೆ ಏಕೈಕ ಮಾಲೀಕ/ವ್ಯವಸ್ಥಾಪಕ ನಿರ್ವಾಹಕ/ವ್ಯವಸ್ಥಾಪಕ ಪಾಲುದಾರನಾಗಿದ್ದರೆ, ಹಣಕಾಸಿನ ಸುಸ್ಥಿತಿಯನ್ನು ತಿಳಿಸಲು ಚಾರ್ಟರ್ಡ್ ಅಕೌಂಟೆಟ್ ಕಾಯ್ದೆ ೧೯೪೯ರ ನಿಯಮ ೭ (೨) (ii). ರ ಪ್ರಕಾರ ಪ್ರಮಾಣಪತ್ರ ಪಡೆದಿರಬೇಕು.<br>೮. (ಎ) ಒಬ್ಬ ಪಾಲುದಾರನನ್ನು ವ್ಯವಸ್ಥಾಪಕ ಪಾಲುದಾರನನ್ನಾಗಿ ಮಾಡಲು ಉಳಿದ ಎಲ್ಲ ಪಾಲುದಾರರು ನಿರ್ಣಯ ಮಾಡಿ ಸಂಸ್ಥೆಯ ಪರವಾಗಿ ಸಹಿ ಮಾಡಿರಬೇಕು.<br>(ಬಿ) ನೋಂದಾಯಿತ ಅಧಿಕೃತ ಪಾಲುದಾರಿಕೆ ಪತ್ರದ ಪ್ರತಿ (ಕಂಪೆನಿಯು ನೌಕರರಿಗೆ ವಿದೇಶದಲ್ಲಿ ಉದ್ಯೋಗ ನೇಮಕಾತಿಗೆ ಅವಕಾಶ ಮಾಡಿಕೊಡಬೇಕು)<br>(ಸಿ) ಪಾಲುದಾರಿಕೆ ಒಪ್ಪಂದಕ್ಕೆ ಸಂಬಂಧಿಸಿದಂತೆ ಸಂಸ್ಥೆಗಳ ನೋಂದಾವಣಾಧಿಕಾರಿಯಿಂದ ಪಡೆದ ನೈಜ ದಾಖಲೆಗಳು<br>(ಡಿ) ಕಳೆದ ಹಣಕಾಸು ವರ್ಷದ ಲೆಕ್ಕ ಪತ್ರ ದಾಖಲೆ |

| | | | | |
|---|---|---|---|---|
| | | | | (ಇ) ಏಜೆನ್ಸಿ/ಸಂಸ್ಥೆ/ಕಂಪೆನಿ ಮತ್ತು ಮಾಲೀಕ/ವ್ಯವಸ್ಥಾಪಕ ನಿರ್ದೇಶಕ/ವ್ಯವಸ್ಥಾಪಕ ಪಾಲುದಾರ/ನಿರ್ದೇಶಕರು/ಪಾಲುದಾರರ ಪ್ಯಾನ್ ಕಾರ್ಡ್ ಪ್ರತಿ<br>(ಎಫ್) ನಿಯಮ ೭ (೨) iii ರ ಪ್ರಕಾರ ಮಾಲೀಕ/ಸಂಸ್ಥೆ/ವ್ಯವಸ್ಥಾಪಕ ಪಾಲುದಾರ/ವ್ಯವಸ್ಥಾಪಕ ನಿರ್ದೇಶಕ/ಕಂಪೆನಿಯ ಆದಾಯ ತೆರಿಗೆ ಮರುಪಾವತಿ ಪ್ರತಿ<br><br>೯. ಎಮಿಗ್ರೇಷನ್ ಕಾಯ್ದೆ ೧೯೮೩ರ ನಿಯಮ ೭(೨)(iv) ರ ಅನ್ವಯ ಅರ್ಜಿದಾರನು ಫಾರ್ಮ್ –II ನ್ನು ಮ್ಯಾಜಿಸ್ಟ್ರೇಟ್ ಅಥವಾ ನೋಟರಿಗೆ ಸಲ್ಲಿಸಿ ಪ್ರಮಾಣಪತ್ರ<br>೧೦. ಫಾರ್ಮ್ (IV) (ಪ್ರಮಾಣಪತ್ರ)- ಎಲ್ಲ ಪಾಲುದಾರರು/ ನಿರ್ದೇಶಕರ ಪರವಾಗಿ ಗೌರವಪೂರ್ವಕವಾಗಿ ಮೆಟ್ರೋಪಾಲಿಟನ್/ಮ್ಯಾಜಿಸ್ಟ್ರೇಟ್ ನ್ಯಾಯಾದೀಶರ ಸಮ್ಮುಖದಲ್ಲಿ ಪ್ರತೀ ಪುಟಕ್ಕೂ ಪ್ರಮಾಣೀಕರಿಸಿ ಸಹಿ ಮಾಡಲಾಗಿದೆ<br>೧೧. ಕಚೇರಿಯ ಜಾಗ ಅರ್ಜಿದಾರನದಾಗಿದ್ದರೆ ಮ್ಯಾಜಿಸ್ಟ್ರೇಟ್/ನೋಟರಿಯಿಂದ ದೃಢೀಕರಿಸಿದ ಮಾಲೀಕತ್ವ ಪತ್ರ/ಸಾಕ್ಷಿ ಅಥವಾ ಕಚೇರಿಯ ಜಾಗ ಬಾಡಿಗೆ ಅಥವಾ ಗುತ್ತಿಗೆಯಾಗಿದ್ದರೆ |

| | | | | |
|---|---|---|---|---|
| | | | | (ಎ) ಮ್ಯಾಜೀಸ್ಟ್ರೇಟ್‌ರಿಂದ ಪ್ರಮಾಣೀಕರಿಸಿದ ಗುತ್ತಿಗೆ ಪತ್ರದ ಪ್ರತಿ. ಗುತ್ತಿಗೆಯು ಮೂರು ವರ್ಷಕ್ಕೆ ಇರುವುದು ಅವಶ್ಯಕ ಅಥವಾ ಕನಿಷ್ಠ ಒಂದು ವರ್ಷಕ್ಕಾದರೂ ಆಗಿದ್ದು, ಗುತ್ತಿಗೆ ಮುಂದುವರಿಸಲು ಅವಕಾಶ ಇರಬೇಕು,<br>(ಬಿ) ಆದಾಯ ಅಂಚೆಚೀಟಿ ಇರುವ ಇತ್ತೀಚಿನ ಮೂಲ ರಶೀದಿ ಪ್ರತಿ, ಮತ್ತು,<br>(ಸಿ) ಕಚೇರಿಯ ನೀಲನಕ್ಷೆಗೆ ಸರ್ಕಾರಿ ಮಾನ್ಯತೆ ಪಡೆದ ವಾಸ್ತುಶಿಲ್ಪಿ ಮತ್ತು ಅರ್ಜಿದಾರರ ಸಹಿ ಮತ್ತು ಅಂಚೆಚೀಟಿ ಹಚ್ಚಿರಬೇಕು. (ನೋಂದಣಿ ಸಂಖ್ಯೆ ಇರಬೇಕು). ಕೊಠಡಿಯ ಆಯಾಮ ಮತ್ತು ಒಟ್ಟು ಕಾರ್ಪೆಟ್‌ಅನ್ನು ಸ್ಪಷ್ಟವಾಗಿ ಸೂಚಿಸಲಾಗಿದೆ<br>೧೨ ನಿರಪೇಕ್ಷಣ ಪ್ರಮಾಣಪತ್ರ (ಫಾರ್ಮ್ ಖಖಖ) ಕಚೇರಿಯ ಜಾಗದ ಮಾಲೀಕರಿಂದ ಮೆಟ್ರೋಪಾಲಿಟನ್/ಮ್ಯಾಜೀಸ್ಟ್ರೇಟ್ ನ್ಯಾಯಾದೀಶರ ಸಮ್ಮುಖದಲ್ಲಿ ಸಹಿ ಮಾಡಲಾಗಿದೆ.<br>೧೩ ಅಂಗಡಿ ಮತ್ತು ವಾಣಿಜ್ಯ ಮಳಿಗೆಗಳ ಕಾಯ್ದೆ ಅನ್ವಯು ಸ್ವಯಂ ದೃಢೀಕರಿಸಿದ ಪ್ರಮಾಣಪತ್ರದ ಪ್ರತಿ<br>೧೪ ಆಸ್ತಿಗಳು/ಹೂಡಿಕೆಗಳು ಇತ್ಯಾದಿ ಒಳಗೊಂಡ ಮೌಲ್ಯಮಾಪನ ವರದಿಯನ್ನು ಸರ್ಕಾರದ ಮಾನ್ಯತೆ ಪಡೆದ ಮೌಲ್ಯಮಾಪಕರಿಂದ ಸಹಿ ಮತ್ತು ಮೊಹರು (ನೋಂದಣಿ ಸಂಖ್ಯೆ ಸಹಿತ) ಹೊಂದಿರಬೇಕು. ವರದಿಯ ಸಂಗಡ ಆಸ್ತಿ/ಹೂಡಿಕೆ/ನಗದು |

| | | | | |
|---|---|---|---|---|
| | | | | ಆಸ್ತಿ/ಬಾಧ್ಯತೆಗಳು ಸಂಬಂಧಿಸಿದಂತೆ ದಾಖಲೆ ಒದಗಿಸಬೇಕು.<br>೧೫.<br>ಆರ್ಥಿಕ ಸದೃಢತೆ ಮಾನದಂಡವಾದ ರೂ. ೬೨ ಲಕ್ಷ ಒಟ್ಟು/ನಿವ್ವಳ ಮೌಲ್ಯ ಪ್ರಮಾಣಪತ್ರವನ್ನು ನೋಂದಾಯಿತ ಲೆಕ್ಕಪರಿಶೋಧಕರಿಂದ ದೃಢೀಕರಿಸಬೇಕು. ಅದು ಮಾಲೀಕ/ಪಾಲುದಾರಿಕಾ ಸಂಸ್ಥೆ/ ಖಾಸಗಿ ನಿಯಮಿತ ಸಂಸ್ಥೆಯ ಒಪ್ಪಿಗೆಗೆ ಒಳಪಟ್ಟಿರಬೇಕು.<br>(ಎ) ಸ್ಥಿರಾಸ್ತಿ<br>(ಬಿ) ಚರಾಸ್ತಿ<br>(ಸಿ) ಬಾಧ್ಯತೆ<br>(ಡಿ) ಒಟ್ಟು ಮೌಲ್ಯ<br><br>೧೬. ಇತ್ತೀಚಿಗಿನ ಕಚೇರಿಯ ದೂರವಾಣಿ ಬಿಲ್‌ನ ಪ್ರತಿ<br>೧೭. ವಸ್ತುಗಳು/ಕೌಶಲ್ಯವನ್ನು ಪರೀಕ್ಷಿಸಿ ಛಾಯಾಚಿತ್ರ ತೆಗೆದು ಪಡೆದ ವ್ಯಾಪಾರ ಪರೀಕ್ಷಾ ಪ್ರಮಾಣಪತ್ರ (ಮೂಲ ಪ್ರತಿ)ವನ್ನು ಕೇಂದ್ರ ಮತ್ತು ರಾಜ್ಯದ ಮಾನ್ಯತೆ ಪಡೆದ ವ್ಯಾಪಾರ ಪರೀಕ್ಷಾ ಕೇಂದ್ರದ ನಿದೇರ್ಶಕರ ಸಹಿ ಮತ್ತು ಮೊಹರು ಹೊಂದಿರಬೇಕು.<br>೧೮ ವಿದೇಶದಲ್ಲಿ ಉದ್ಯೋಗ ಮಾಡಲು ಮಾನವಶಕ್ತಿಯ ನೇಮಕಾತಿಯಲ್ಲಿ ಅನುಭವ<br>(ಎ) ಅರ್ಜಿದಾರ ನೆಲೆಸಲು ಇಚ್ಚಿಸುವ ರಾಷ್ಟಗಳ ಹೆಸರುಗಳು<br>(ಬಿ) ವಾರ್ಷಿಕವಾಗಿ ನಿಯೋಜಿಸಲು ಪ್ರಸ್ತಾಪಿಸುವ್ ನೌಕರರ ಹೆಸರುಗಳು<br>(ಸಿ) ಮಾರುಕಟ್ಟೆ ಅಭಿವೃದ್ಧಿಯ ಯೋಜನೆಗಳು<br>೧೯ ಅರ್ಜಿದಾರನ ಕಚೇರಿ ಮತ್ತು ಮಾಲೀಕ/ವ್ಯವಸ್ಥಾಪಕ ಪಾಲುದಾರ/ವ್ಯವಸ್ತಾಪಕ ನಿರ್ದೇಶಕ/ಕಂಪೆನಿಯ ಪಾಲುದಾರನ |

| | | | | |
|---|---|---|---|---|
| | | | | ವಾಸಸ್ಥಳಗಳಿಗೆ ಸಂಬಂಧಿಸಿದ ಪೊಲೀಸ್ ಪರಿಶೀಲನಾ ವರದಿ ೨೦ ಸಂಬಂಧಪಟ್ಟ ಪ್ರೊಟೆಕ್ಟರ್ ಆಫ್ ಎಮಿಗ್ರೆಂಟ್ಸ್‌ಯಿಂದ ಪಡೆದ ಕಚೇರಿ ಜಾಗದ ತನಿಖಾ ವರದಿ. |
| | | | | |
| ೨. | ಎಮಿಗ್ರೇಷನ್ ಕಾಯ್ದೆ ೧೯೮೩ಎ ಸೆಕ್ಷನ್ ೧೧ (೪)ರ ಅನ್ವಯ **ನೋಂದಣಿ ಪ್ರಮಾಣಪತ್ರ ನೀಡಿಕೆ** | ಪ್ರೊಟೆಕ್ಟರ್ ಜನರಲ್ ಆಫ್ ಎಮಿಗ್ರೆಂಟ್ಸ್. ಫೋನ್: ೦೧೧-೨೬೮೭ ೪೨೫೦ ಫ್ಯಾಕ್ಸ್: ೦೧೧ ೨೪೧೯ ೭೯೮೪ ಇ ಮೈಲ್: pge@mea.gov.in | **ಸಂಪೂರ್ಣ ದಾಖಲೆಗಳ ರಶೀದಿ ನೀಡಿದ ದಿನದಿಂದ ೧೫ ಕೆಲಸದ ದಿನಗಳು** (ಸೇವೆಗಳನ್ನು ಒದಗಿಸಲು ನಿಗದಿಪಡಿಸಿರುವ ಸಮಯ (ದಿನಗಳು)ವು ಎಲ್ಲ ದಾಖಲೆಗಳ ಲಭ್ಯತೆ ಮೇಲೆ ಅವಲಂಬಿತವಾಗಿರುತ್ತದೆ. ಹೆಚ್ಚುವರಿ ಮಾಹಿತಿ ಅಗತ್ಯವಿದ್ದಲ್ಲಿ, ದಾಖಲೆಗಳಲ್ಲಿ ಕೊರತೆ ಕಂಡು ಬಂದಲ್ಲಿ/ ಪರಿಶೀಲಿಸಬೇಕಾದಲ್ಲಿ ಸೇವೆಯನ್ನು ಒದಗಿಸಲು ದಿನಗಳನ್ನು ನಿಗದಿಪಡಿಸಲಾಗದು. | ಮುಂದಿನ ಚಟುವಟಿಕೆಗೆ ಅರ್ಹತಾ ಪತ್ರವನ್ನು ನೀಡಿದ ಒಂದು ತಿಂಗಳ ಒಳಗೆ ಎಮಿಗ್ರೇಷನ್ ನಿಯಮಗಳು ೧೯೮೩ ರ ನಿಯಮ ೮ರ ಪ್ರಕಾರ ವಿಶದಪಡಿಸಿರುವಂತೆ ರೂ. ೫೦,೦೦,೦೦೦ (ಐವತ್ತು ಲಕ್ಷ ರೂಗಳು ಮಾತ್ರ) ಭದ್ರತಾ ಠೇವಣಿಯನ್ನು ೮ ವರ್ಷಗಳ ಕಾಲ ಬ್ಯಾಂಕ್‌ಗೆ ಗ್ಯಾರಂಟಿಯಾಗಿ ಯಾವುದೇ ರಾಷ್ಟ್ರೀಕೃತ ಬ್ಯಾಂಕ್/ಸೆಡ್ಯೂಲ್ಡ್ ಕಮರ್ಷಿಯಲ್ ಬ್ಯಾಂಕ್‌ನಿಂದ ನೀಡುವುದು. ಭದ್ರತಾ ಠೇವಣಿಯನ್ನು ಮರು ಪಡೆಯಲು ೬ ತಿಂಗಳನ್ನು ಹೊರತು ಪಡಿಸಲಾಗುವುದು.<br><br>ನೇಮಕಾತಿ ಘಟಕ ಅಥವಾ ಪ್ರಾಧಿಕಾರವಾಗಿ ನೋಂದಾಯಿಸಿಕೊಳ್ಳಲು ಇಚ್ಛಿಸುವ ಘಟಕವು, ಕಡಿತಗೊಳಿಸಿದ ಶುಲ್ಕವಾದ ರೂ.೮ ಲಕ್ಷದೊಂದಿಗೆ ಆ ಕಾರ್ಯವನ್ನು ಮಾಡಬಹುದು. ಆದರೆ, ನೇಮಕ ಮಾಡಿಕೊಳ್ಳಬಹುದಾದ ಸಿಬ್ಬಂದಿಯ ಸಂಖ್ಯೆಯು ೧೦೦ ಮೀರಬಾರದು.<br><br>ಪ್ರಮಾಣಪತ್ರದಲ್ಲಿ ನಿಗದಿಪಡಿಸಿದ ನೌಕರರಿಗಿಂತ ಹೆಚ್ಚು ಮಂದಿಯನ್ನು ನೇಮಕ ಮಾಡಿಕೊಳ್ಳಬೇಕಾಗಿ ಬಂದಲ್ಲಿ, ಗಡುವು ಮುಗಿಯುವ ಮುನ್ನ |

| | | | | |
|---|---|---|---|---|
| | | | | ನೋಂದಣಿ ಅಧಿಕಾರಿಯಿಂದ ಹೆಚ್ಚುವರಿ ನೌಕರರನ್ನು ನೇಮಕ ಮಾಡಿಕೊಳ್ಳಲು ಪ್ರಮಾಣ ಪತ್ರದ ಅವಧಿ ಮುಗಿಯುವವರೆಗೆ ಅನುಮತಿ ಪಡೆಯಲು ೧೦೦ ನೌಕರರಿಗೆ ಹೆಚ್ಚುವರಿಯಾಗಿ ೮ ಲಕ್ಷ ರೂಗಳನ್ನು ಭದ್ರತಾ ಠೇವಣಿ ನೀಡಬೇಕು.<br><br>(ii) ಬ್ಯಾಂಕ್ ಗ್ಯಾರಂಟಿಯ ಸತ್ಯಾಸತ್ಯತೆಯನ್ನು ಸಂಬಂಧಪಟ್ಟ ಬ್ಯಾಂಕ್ ಮತ್ತು ಪ್ರಾದೇಶಿಕ ಕಚೇರಿಯು ಖಾತರಿ ಪಡಿಸುವುದು. |
| ೩ | ಎಮಿಗ್ರೆಂಟ್ಸ್ ಕಾಯ್ದೆ ೧೯೮೩ರ ಸೆಕ್ಷನ್ ೧೭ರ ಪ್ರಕಾರ ವಿದೇಶದಲ್ಲಿ ಉದ್ಯೋಗ ಮಾಡಲು ಯೋಜನಾ ರಫ್ತುದಾರ ಮತ್ತು ವಿದೇಶಿ ಉದ್ಯೋಗಿಯಿಂದ ಅನುಮತಿ ಅರ್ಜಿ ಪ್ರಕ್ರಿಯೆ | **ಪ್ರೊಟೆಕ್ಟರ್ ಜನರಲ್** ಆಫ್ ಎಮಿಗ್ರೆಂಟ್ಸ್ ದೂರವಾಣಿ: ೦೧೧-೨೩೮೭ ೪೨೫೦ ಫ್ಯಾಕ್ಸ್: ೦೧೧-೨೪೧೯ ೭೯೮೮ ಇ ಮೈಲ್:<br><br>pge@mea.gov.in | ಸಂಪೂರ್ಣ ದಾಖಲೆಯ ರಶೀದಿ ಪಡೆದ ದಿನದಿಂದ ೩೦ ದಿನಗಳು (ಸೇವೆಗಳನ್ನು ಒದಗಿಸಲು ನಿಗದಿಪಡಿಸಿರುವ ಸಮಯ (ದಿನಗಳು)ವು ಎಲ್ಲ ದಾಖಲೆಗಳ ಲಭ್ಯತೆ ಮೇಲೆ ಅವಲಂಬಿತವಾಗಿರುತ್ತದೆ. ಹೆಚ್ಚುವರಿ ಮಾಹಿತಿ ಅಗತ್ಯವಿದ್ದಲ್ಲಿ, ದಾಖಲೆಗಳಲ್ಲಿ ಕೊರತೆ ಕಂಡು ಬಂದಲ್ಲಿ/ ಪರಿಶೀಲಿಸಬೇಕಾದಲ್ಲಿ ಸೇವೆಯನ್ನು ಒದಗಿಸಲು ದಿನಗಳನ್ನು ನಿಗದಿಪಡಿಸಲಾಗದು.) | **ಸರಿಯಾದ ದಾಖಲೆಗಳ ಸಂಗಡ** **www.emigrate.gov.in** **ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು :-**<br><br>(೧)ಪಾವತಿ ಮತ್ತು ಅಕೌಂಟ್ಸ್ ಅಧಿಕಾರಿ, ವಿದೇಶಾಂಗ ವ್ಯವಹಾರಗಳ ಸಚಿವಾಲಯ, ನವ ದೆಹಲಿ ಇವರ ಹೆಸರಿನಲ್ಲಿ ರೂ. ೨೦೦೦ರ ಆನ್‌ಲೈನ್ ಪಾವತಿ/ಡಿಮಾಂಡ್ ಡ್ರಾಫ್ಟ್<br>(೨) ಅರ್ಜಿದಾರರ ಫಾರ್ಮ್ ೬ & ೭ನಲ್ಲಿ ಎಮಿಗ್ರೇಷನ್ ಕಾಯ್ದೆ ೧೯೮೩ ನಿಯಮ ೧೧ರ ಪ್ರಕಾರ ಭಾರತೀಯ ನೌಕರರ ನೇಮಕಾತಿಗೆ ಅನುಮತಿ ಪಡೆಯುವುದು.<br>(೩) ವಿದೇಶದಲ್ಲಿ ಉದ್ಯೋಗ ಮಾಡಲು ಮಾನವಶಕ್ತಿಯನ್ನು ನೇಮಿಸುವ ಮೆಮೊರೆಂಡಮ್ ಆಫ್ ಅಸೋಷಿಯೇಷನ್ ಕಂಪೆನಿಯ ಉದ್ದೇಶಗಳಲ್ಲಿ ಒಂದಾಗಿದೆ. |

| | | | | |
|---|---|---|---|---|
| | | | | (೪) ಕಂಪೆನಿಯ ಮೆಮೊರೆಂಡಮ್ ಆಫ್ ಆರ್ಟಿಕಲ್ ಆಫ್ ಅಸೋಷಿಯೇಶನ್<br>(೫)ಸಂಬಂಧಪಟ್ಟ ದೇಶದ (ಐಬಿಯಾ, ಕುವೈತ್, ಅಫ್ಘಾನಿಸ್ತಾನ್, ಮಲೇಷಿಯಾ) ಭಾರತೀಯ ಎಂಬೆಸಿಯಿಂದ ಯೋಜನೆ ರಫ್ತುದಾರ ಮತ್ತು ವಿದೇಶಿ ಉದ್ಯೋಗಿಗಳ ನಡುವೆ ಸರಿಯಾಗಿ ಪರಿಶೀಲಿಸಿದ ಒಪ್ಪಂದ ಪತ್ರ. ಸಂಬಳದ ವಿವರ (ಸಂಬಂಧಪಟ್ಟ ದೇಶಕ್ಕೆ ಅನ್ವಯವಾಗುವ ಕನಿಷ್ಠ ವೇತನ)<br>(೬)ಕನಿಷ್ಠ ರೂ. ೧,೦೦,೦೦೦ದಿಂದ ಗರಿಷ್ಠ ರೂ. ೨೦,೦೦,೦೦೦ ಸಂಬಳಕ್ಕೆ ನೇಮಕವಾದ ಪ್ರತೀ ವ್ಯಕ್ತಿಗೆ ರೂ.೧೦,೦೦೦ ಬ್ಯಾಂಕ್ ಗ್ಯಾರಂಟಿ<br>(೭) "ಕ್ಲಾಸ್ ೨ ಲೆಂಥ್ ಉದ್ಯೋಗ ಒಪ್ಪಂದದ ಮಾದರಿ/ಒಪ್ಪಂದದ ಅವಧಿ |
| | | | | |

| ಕ್ರಮ ಸಂಖ್ಯೆ | ಸೇವೆಗಳ ವಿವರ | ಅಧಿಕಾರಿಗಳ ಜವಾಬ್ದಾರಿ (ಸೇವೆ ಒದಗಿಸುವ ಹುದ್ದೆ, ದೂರವಾಣಿ ಸಂಖ್ಯೆ, ಇಮೈಲ್) | ಸೇವೆಯನ್ನು ಒದಗಿಸುವ ಕೆಲಸದ ದಿನಗಳು | ಅಗತ್ಯ ದಾಖಲೆಗಳು |
|---|---|---|---|---|
| ೪ | ಎಮಿಗ್ರೇಷನ್ ಕಾಯ್ದೆ ೧೯೮೩ರ ಸೆಕ್ಷನ್ ೨೨ರ ಎಮಿಗ್ರೇಷನ್ ಕ್ಲಿಯರನ್ಸ್ | **ಪ್ರೊಟೆಕ್ಟರ್ ಆಫ್ ಎಮಿಗ್ರೆಂಟ್ಸ್ ವಿವರ ಇಲ್ಲಿ ಲಭ್ಯ** http://emigrate.gov.in/ext/static/PoEsOfficeDetaails.pdf | **ಕೆಲಸದ ದಿನಗಳು ೩** (ವಿಸಾದ ಮಾನ್ಯತೆ ಮುಗಿಯುವ ೧೫ ದಿನಗಳಿಗೂ ಮೊದಲು ಅಥವಾ ವಲಸಿಗನಿಗೆ | **ಕೆಳಗಿನ ಬೆಂಬಲಿತ ದಾಖಲೆಗಳ ಸಂಗಡ** www.emigrate.gov.in **ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು** |

| | | | | |
|---|---|---|---|---|
| | ಪ್ರಕ್ರಿಯೆ | | ವೀಸಾ ವಿತರಿಸಿದಾಗಲೇ ಆದಷ್ಟು ಬೇಗ ಇಸಿಗಾಗಿ ಅರ್ಜಿ ಸಲ್ಲಿಸುವಂತೆ ಆರ್‌ಎ, ಎಮಿಗ್ರೆಂಟ್ಸ್ ಮತ್ತು ವಿದೇಶಿ ಉದ್ಯೋಗಿಗಳಿಗೆ ಸಲಹೆ ನೀಡಲಾಗಿದೆ.) | (i) ಬ್ಯಾಂಕ್ ಚಲನ್/ ಆನ್‌ಲೈನ್ ಪಾವತಿ ಮೂಲಕ ರೂ. ១೦೦<br>(ii) ಪಾಸ್‌ಪೋರ್ಟ್ ಪ್ರತಿ ( ಕನಿಷ್ಠ ೬ ತಿಂಗಳು ಮಾನ್ಯತೆ ಪಡೆದಿರಬೇಕು)<br>(iii) ಮಾನ್ಯತೆ ಇರುವ ವೀಸಾ ಪ್ರತಿ (ನೇರ ನೇಮಕಾತಿಯಾಗಿದ್ದಲ್ಲಿ ಇಂಡಿಯನ್ ಮಿಷನ್‌ನಿಂದ ದೃಢೀಕರಿಸುವುದು ಅವಶ್ಯ)<br>(iv) ವಿದೇಶಿ ಉದ್ಯೋಗಿ ಮತ್ತು ಆರ್‌ಎಯಿಂದ ಸರಿಯಾಗಿ ಸಹಿ ಮಾಡಿದ ಉದ್ಯೋಗ ಒಪ್ಪಂದದ ಪ್ರತಿ ಮತ್ತು ಎಮಿಗ್ರೆಂಟ್ (ವಲಸೆ) ಪ್ರತಿ (ನೇರ ನೇಮಕಾತಿಯಾಗಿದ್ದಲ್ಲಿ ಇಂಡಿಯನ್ ಮಿಷನ್‌ನಿಂದ ದೃಢೀಕರಿಸುವುದು ಅವಶ್ಯ)<br>(v) ಪ್ರವಾಸೀ ಭಾರತೀಯ ಬಿಮಾ ಪಾಲಿಸಿ<br>(vi) ವಲಸಿಗನ ಫೋಟೊ/ಭಾವಚಿತ್ರ |

ಸೇವೆಗಳನ್ನು ಒದಗಿಸಲು ನಿಗದಿಪಡಿಸಿರುವ ಸಮಯ (ದಿನಗಳು)ವು ಎಲ್ಲ ದಾಖಲೆಗಳ ಲಭ್ಯತೆ ಮೇಲೆ ಅವಲಂಬಿತವಾಗಿರುತ್ತದೆ.

ಹೆಚ್ಚುವರಿ ಮಾಹಿತಿ ಅಗತ್ಯವಿದ್ದಲ್ಲಿ, ದಾಖಲೆಗಳಲ್ಲಿ ಕೊರತೆ ಕಂಡು ಬಂದಲ್ಲಿ/ ಪರಿಶೀಲಿಸಬೇಕಾದಲ್ಲಿ ಸೇವೆಯನ್ನು ಒದಗಿಸಲು ದಿನಗಳನ್ನು ನಿಗದಿಪಡಿಸಲಾಗದು.

**ಕುಂದು ಕೊರತೆ ಪರಿಹಾರ:** ವಿದೇಶದಲ್ಲಿ ಉದ್ಯೋಗಕ್ಕೆ ಸಂಬಂಧಿಸಿದಂತೆ ಕುಂದುಕೊರತೆ/ದೂರುಗಳನ್ನು ವಲಸಿಗರು/ಅವರ ಸಂಬಂಧಿಗಳು ಅಥವಾ ಪ್ರವಾಸಿ ಭಾರತೀಯ ಸಹಾಯಕ ಕೇಂದ್ರ, ದೆಹಲಿ ಮೂಲಕ ಸಲ್ಲಿಸಬಹುದು. ಇದು ಇ- ಮೈಗ್ರೇಟ್ ಪೋರ್ಟಲ್‌ನೊಂದಿಗೆ ನೇರ ಸಂಪರ್ಕ ಹೊಂದಿದೆ. ಕುಂದುಕೊರತೆಗಳನ್ನು ಉಚಿತ ದೂರವಾಣಿ ಸಂಖ್ಯೆ ೧೮೦೦ ೧೧ ೩೦೯೦ ಅಥವಾ ೯೧ ೧೧ ೪೦೫೦೩೦೯೦/೨೩೮೮೫೦೨೧ (ಚಾರ್ಜಬಲ್) ಅಥವಾ helpline@mea.gov.in. ದೆಹಲಿ, ಕೊಚ್ಚಿ, ಹೈದ್ರಾಬಾದ್, ಚೆನ್ನೈ ಮತ್ತು ಲಖನೌಗಳಲ್ಲಿ ಇರುವ ಪ್ರೊಟೆಕ್ಟರ್ ಆಫ್ ಎಮಿಗ್ರೆಂಟ್ಸ್ (ಪಿಒಇ) ಕಚೇರಿಯಲ್ಲಿ ನೇರವಾಗಿ ದೂರು ದಾಖಲಿಸಬಹುದು. ಈ ಕುಂದು ಕೊರತೆಗಳನ್ನು ಈಗಾಗಲೇ ರಚಿಸಿರುವ ಪ್ರಕ್ರಿಯೆಗಳಿಗೆ ಅನುಸಾರ ಸಂಬಂಧಪಟ್ಟ ಪ್ರೊಟೆಕ್ಟರ್ಸ್ ಆಫ್ ಎಮಿಗ್ರೆಂಟ್ಸ್ (ಪಿಒಇ) ತಮ್ಮ ವ್ಯಾಪ್ತಿಯ ದೂರುಗಳನ್ನು ಬಗೆಹರಿಸುವರು.

**ಹೆಚ್ಚುಬಾರಿ ಕೇಳಲಾದ ಪ್ರಶ್ನೆಗಳು (ಎಫ್‌ಎಕ್ಯು), ದಯಮಾಡಿ ನೋಡಿ:-**

http://emigrate.gov.in/ext/faqAction.action#EmigQ1